ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ(ಶ್ರೀರಂಗಪಟ್ಟಣ):– ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 15ನೆಯ ವರದಿ ಹಾಗೂ 14ನೇ ವರದಿಯ ಶಿಫಾರಸ್ಸುಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಮೇಲಿನ ವರದಿಗಳನ್ನು ಸಮಿತಿಯ ಅಧ್ಯಕ್ಷಳಾದ ನಾನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:– ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳ ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕವನ್ನು ಮಂಡಿಸಲಿಕ್ಕೆ ಅವಕಾಶ ಮಾಡಿಕೊಡಿ ಮಂಡಿಸಿದರೆ ಆಯಿತು. ಮಂಡಿಸದಿದ್ದರೆ ಅದು ಲ್ಯಾಪ್ಸ್ ಆಗುತ್ತದೆ. ಖಾಸಗಿ ಸದಸ್ಯರ ವಿಧೇಯಕ ಇದೆ ಅದಕ್ಕೋಸ್ಕರ ಹೇಳುತ್ತಿದ್ದೇನೆ. ಈಗ ಮಂಡಿಸದಿದ್ದರೆ ನಾವು ಪುನಃ ಮಂಡಿಸಲಿಕ್ಕೆ ಸೆಪರೇಟ್ ಅಪ್ಲಿಕೇಷನ್ ಕೊಡಬೇಕು. ಮಂಡಿಸಿಬಿಟ್ಟರೆ ಆಮೇಲೆ ಅದು ಸಮಿತಿಗೆ ಹೋಗುತ್ತದೆ.

ಶ್ರೀ ಎ. ರಾಮದಾಸ್:– ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳುತ್ತಿಲ್ಲ. ಕಳೆದ ನಾಲ್ಕು ದಿವಸಗಳ ಹಿಂದೆ ನಾನು ಶೂನ್ಯ ವೇಳೆಯಲ್ಲಿ ನಗರಾಭಿವೃದ್ಧಿ ಸಚಿವರನ್ನು ಉತ್ತರ ಕೊಡಬೇಕೆಂದು ಕೇಳಿದ್ದೆ. ನಾನು ಪ್ರಶ್ನೆ ಕೇಳುತ್ತಿಲ್ಲ. ಅದನ್ನು ತಮಗೆ ನೆನಪು ಮಾಡುತ್ತಿದ್ದೇನೆ. ಅಷ್ಟೆ. ಮಂತ್ರಿಗಳು ಇದ್ದಾರೆ ಅವರಿಂದ ಉತ್ತರ ಕೊಡಿಸಿಕೊಡಿ. ಬೆಳಿಗ್ಗೆಯೇ ತಮ್ಮನ್ನು ಕೇಳಿದೆ. ತಾವು ಫೋನ್ ಮಾಡಿ ಕೂಡ ಹೇಳಿದಿರಿ.

ಅಧ್ಯಕ್ಷರು:– ಇನ್ನು ಎರಡು ಮೂರು ದಿವಸ ಸದನ ಸೇರುತ್ತದೆ ಉತ್ತರ ಕೊಡುತ್ತಾರೆ. ಬಿಡಿ. ಖಾಸಗಿ ಸದಸ್ಯರ ವಿಧೇಯಕವನ್ನು ಮಂಡಿಸಲಿ.

9) ಖಾಸಗಿ ಸದಸ್ಯರ ಕಾರ್ಯಕಲಾಪಗಳು (ವಿಧೇಯಕದ ಮಂಡನೆ)

ಅ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2002. ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಬಿ. ಮಲ್ಲಿಕಾರ್ಜುನ(ಬೀರೂರು):– ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ, 2002ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:– ಮಾನ್ಯ ಅಧ್ಯಕ್ಷರೆ, 2002ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಅನುಬಂಧ ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ

6.40 ಪಿ.ಎಂ

ಅಧ್ಯಕ್ಷರು:– ಶೆಟ್ಟರ್‌ರವರದ್ದು ಆದ ಮೇಲೆ ಸಂಪಂಗಿಯವರು ಮಾತನಾಡುತ್ತಾರೆ. ವಿರೋಧ ಪಕ್ಷದ ನಾಯಕರಿಗೆ ನಾನು ಮೊದಲು ಅವಕಾಶ ಕೊಡಬೇಕಾಗುತ್ತದೆ. ಶೆಟ್ಟರ್‌ರವರೇ ಮಾತನಾಡಿ.